# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ ಃ 538/2021**

ಚಾಸಾ ಃ 12
ಪ್ರಾಸಾ ಃ 9

| | |
|---|---|
| **ಹೆಸರು** | ಃ ಡಾ|| ಶ್ರೀನಿವಾಸಮೂರ್ತಿ ಸಿ |
| **ತಂದೆಯ ಹೆಸರು** | ಃ ಲೇಟ್ ಪಿ ಎಂ ಚಾಮ |
| **ವಯಸ್ಸು** | ಃ 55 ವರ್ಷ |
| **ಉದ್ಯೋಗ** | ಃ ಮೂಳೆ ತಜ್ಞ, ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಮೂಡಿಗೆರೆ |
| **ವಾಸಸ್ಥಳ** | ಃ ಮೂಡಿಗೆರೆ |

**ದಿನಾಂಕ ಃ 23-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸ. ಸ. ಅ. ರವರಿಂದ ಃ -**

ನಾನು ದಿನಾಂಕ 05-07-2010 ರಿಂದ ದಿನಾಂಕ 14-09-2023 ರವರೆಗೆ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಮೂಳೆ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 20-12-2020 ರಂದು ಬೆಳಿಗ್ಗೆ ಸುಮಾರು 9.00 ಗಂಟೆಗೆ ಚಾಸಾ-1 ರವರು ತನ್ನ ಗಂಡನಾದ ಮುನೀರ್ ನಡೆಸಿದ ಹಲ್ಲೆಯ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ಬಂದಿದ್ದು, ನಾನು ಚಾಸಾ-1 ರವರನ್ನು ಪರೀಕ್ಷಿಸಿದಾಗ ಚಾಸಾ-1 ರವರಿಗೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಗಾಯದ ಸಂಖ್ಯೆ

1. ಎಡಕೈನ ಕಿರುಬೆರಳಿನ ಅಂಗೈಯಲ್ಲಿ 1*1*1 ಸೆಂ ಮೀ ಜಜ್ಜಿದ ಗಾಯವಾಗಿರುತ್ತದೆ.
2. ಎಡಕೈ ಉಂಗುರ ಬೆರಳಿನಲ್ಲಿ 0.5*0.5*0.5 ಸೆಂ ಮೀ ಜಜ್ಜಿದ ಗಾಯವಾಗಿರುತ್ತದೆ.
3. ಎಡಕೈನ ಮಧ್ಯದ ಬೆರಳಿನಲ್ಲಿ 0.5*0.5*0.5 ಸೆಂ ಮೀ ಜಜ್ಜಿದ ಗಾಯವಾಗಿರುತ್ತದೆ.
4. ಎಡಕೈನ ಕಿರುಬೆರಳಿನ ಹತ್ತಿರ ಅಂಗೈಯಲ್ಲಿ 1*1*1 ಸೆಂ ಮೀ ಜಜ್ಜಿದ ಗಾಯವಾಗಿರುತ್ತದೆ.

ನಂತರ ನಾನು ಚಾಸಾ-1 ರವರನ್ನು ಪರೀಕ್ಷಿಸಿ ಚಿಕಿತ್ಸೆಯನ್ನು ನೀಡಿರುತ್ತೇನೆ. ಮೇಲೆ ಹೇಳಿದ ಎಲ್ಲಾ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಚಾಸಾ-1 ರವರನ್ನು ಪರೀಕ್ಷಿಸಿ ಅವರಿಗೆ ಆದ ಗಾಯದ ಬಗ್ಗೆ ನೀಡಿರುವ ಗಾಯದ ಪ್ರಮಾಣಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ16 ಎಂದು, ಸಾಕ್ಷಿಯ ಸಹಿಯನ್ನು 16(ಎ) ಎಂದು ಗುರುತಿಸಲಾಯಿತು.

ನಂತರ ದಿನಾಂಕ 29-12-2020 ರಂದು ವಿರಾಜಪೇಟೆ ನಗರ ಪೋಲಿಸರು ಒಂದು ಮನವಿ ಪತ್ರ ನೀಡಿ, ಮಂಡಕತ್ತಿಯನ್ನು ಹಾಜರುಪಡಿಸಿ ಸದರಿ ಮನವಿ ಪತ್ರದಲ್ಲಿ ಸದರಿ ಮಂಡಕತ್ತಿಯಿಂದ ಚಾಸಾ-1 ರವರಿಗೆ ಆದ ಗಾಯವು ಆಗುವ ಸಾಧ್ಯತೆ ಇರುತ್ತದೆಯೇ ಎಂದು ಅಭಿಪ್ರಾಯ ಕೋರಿದ್ದು ಹಾಗೂ ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಮರು ಪ್ಯಾಕ್ ಮಾಡಿ, ಸೀಲು ಮಾಡಿ ಕೊಡುವಂತೆ ಕೋರಿಕೊಂಡಿದ್ದು, ಆ ಪ್ರಕಾರ ನಾನು ದಿನಾಂಕ 01-01-2021 ರಂದು ಸದರಿ ಮಂಡಕತ್ತಿಯನ್ನು ಪರಿಶೀಲಿಸಿ ಅದರಲ್ಲಿ ಶಾರ್ಪ್ ಹಾಗೂ ಬ್ಲಂಟ್ ಎಡ್ಜ್ ಇದ್ದು, ಸದರಿ ಕತ್ತಿಯನ್ನು ಎಳೆದಾಡಿದಾಗ ನಾನು ಗಾಯದ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಅಭಿಪ್ರಾಯ ನೀಡಿರುತ್ತೇನೆ. ಅಲ್ಲದೆ ಅದೇ ದಿನ ಸದರಿ ಮಂಡಕತ್ತಿಯನ್ನು ಯಥವತ್ತಾಗಿ ಪ್ಯಾಕ್ ಮಾಡಿ, ಸೀಲು ಮಾಡಿ, ತಜ್ಞರ ಪರೀಕ್ಷೆಗೆ ಕಳುಹಿಸಿಕೊಡುವ ಸಲುವಾಗಿ ಪೋಲಿಸರ ವಶಕ್ಕೆ ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ತಾನು ಮೇಲೆ ಹೇಳಿದಂತೆ ಕತ್ತಿಯನ್ನು ಪರಿಶೀಲಿಸಿ ನೀಡಿದ ಅಭಿಪ್ರಾಯ ದೃಡಿಕರಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಅಭಿಪ್ರಾಯ ದೃಡಿಕರಣ ಪತ್ರವನ್ನು ನಿಪಿ17 ಎಂದು, ಸಾಕ್ಷಿಯ ಸಹಿಯನ್ನು 17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು ಮಾ 1ನ್ನು ನೋಡಿ ಗುರುತಿಸುತ್ತಾರೆ.

**<u>ಪಾಟಿ ಸವಾಲು ಃ ಶ್ರೀ. ಹೆಚ್ ಆರ್ ಎ ಆರೋಪಿ ಪರ ವಕೀಲರಿಂದ ಃ</u>**

ಚಾಸಾ-1 ರವರ ಜೊತೆ ಆಸ್ಪತ್ರೆಗೆ ಅವರ ತಂದೆ ಬಂದಿರುತ್ತಾರೆ. ಚಾಸಾ1 ರವರು ಆಸ್ಪತ್ರೆಗೆ ಬಂದಾಗ ಅವರ ಎಡಕೈಯಲ್ಲಿ ರಕ್ತ ಗಾಯವಾಗಿರುತ್ತದೆ. ಅವರು ಆಸ್ಪತ್ರೆ ಬರುವಾಗ ಸದರಿ ಗಾಯಕ್ಕೆ ಯಾವುದೇ ಬಟ್ಟೆ ಅಥವಾ ಹತ್ತಿ ಸುತ್ತಿಕೊಂಡು ಬಂದಿರುವುದಿಲ್ಲ, ಸದರಿ ಗಾಯ ಇದ್ದ ಸ್ಥಿತಿಯಲ್ಲೆ ಬಂದಿರುತ್ತಾರೆ. ಒಬ್ಬ ವ್ಯಕ್ತಿ ಆಯಾ ತಪ್ಪಿ ಭಾರವಾದ ಅಥವಾ ಚೂಪಾದ ವಸ್ತುವಿನ ಮೇಲೆ ಬಿದ್ದಾಗ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಮು ಮಾ 1 ಕತ್ತಿಯನ್ನು ಪೋಲಿಸರೇ ಹಾಜರುಪಡಿಸಿರುತ್ತಾರೆ.

ಸದರಿ ಕತ್ತಿಯನ್ನು ದಿನಾಂಕ 29-12-2020 ರಂದು ಪೋಲಿಸರು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಕತ್ತಿಯನ್ನು ನನ್ನ ಮುಂದೆ ಹಾಜರುಪಡಿಸಿದಾಗ ಅದರಲ್ಲಿ ಯಾವುದೇ ರಕ್ತದ ಕಲೆಗಳು ಇದ್ದಿರಲಿಲ್ಲ. ಪೋಲಿಸರು ನನ್ನ ಮುಂದೆ ಮು ಮಾ 1 ಕತ್ತಿಯನ್ನೇ ಹಾಜರುಪಡಿಸಿದ್ದರು ಎಂಬ ಬಗ್ಗೆ ಯಾವುದೇ ನಿಖರವಾದ ಗುರುತು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರ ಕೋರಿಕೆಯ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಯಾವುದೇ ಕತ್ತಿಯನ್ನು ಪರೀಕ್ಷಿಸಿ ಅಭಿಪ್ರಾಯ ನೀಡಿರುವುದಿಲ್ಲ ಬದಲಾಗಿ ಪೋಲಿಸರು ಕೋರಿಕೆಯ ಮೇರೆಗೆ ನಿಪಿ17 ರಂತೆ ಸುಳ್ಳು ಅಭಿಪ್ರಾಯ ದೃಢೀಕರಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.